# ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ



ಸಂಪಾದಕರು

ಡಾ. ವಿದ್ಯಾವತಿ ರಜಪೂತ
ಡಾ. ಎಸ್. ಟಿ. ಮೇರವಾಡೆ
ಡಾ. ಆರ್. ವಿ. ಪಾಟೀಲ

Scanned with CamScanner

# ಪರಿವಿಡಿ

೧. ಪತ್ರಿಕೆಗಳ ಸ್ಥಿತಿ–ಗತಿ ೧

- ಡಾ. ಬಸವರಾಜ ಜಗಜಂಪಿ

೨. ರಾಷ್ಟ್ರೀಯತೆ ಮತ್ತು ಪಂಡಿತ ದೀನದಯಾಳ ಉಪಾಧ್ಯಾಯ ೪

- ಡಾ. ಎಸ್. ಟಿ. ಮೇರವಾಡೆ

೩. ಮಾಧ್ಯಮಲೋಕ ೯

- ಡಾ. ವಿ. ಎಸ್. ಮಾಳಿ

೪. ಹಿಂದಿ ಪತ್ರಿಕೋದ್ಯಮ : ಪಂ. ದೀನದಯಾಳ ಉಪಾಧ್ಯಾಯ ೧೨

- ಡಾ. ವಿದ್ಯಾವತಿ ಜೆ. ರಜಪೂತ

೫. ಕನ್ನಡ ಸಾಹಿತ್ಯ – ಮುದ್ರಣ ಹಾಗೂ ಮಾಧ್ಯಮಗಳು ೧೪

- ಡಾ. ಜಿನದತ್ತ ಅ. ಹಡಗಲಿ

೬. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ ೧೭

- ಪ್ರೊ. ಬಿ. ಬಿ. ಡೆಂಗನವರ

೭. ಸ್ವಾಮಿ ವಿವೇಕಾನಂದರ ಉಪನ್ಯಾಸಗಳು ಹಾಗೂ ರಾಷ್ಟ್ರಧರ್ಮ ೨೫

- ಡಾ. ಆರ್. ವಿ. ಪಾಟೀಲ

೮. ಸುಭದ್ರಾಕುಮಾರಿ ಚೌಹಾನ ಅವರ ಕಾವ್ಯದಲ್ಲಿ ರಾಷ್ಟ್ರೀಯತೆ ೩೮

- ಡಾ. ಎಸ್. ಜೆ. ಜಹಾಗೀರದಾರ

೯. ಬಸವರಾಜ ಕಟ್ಟೀಮನಿಯವರ ಕಥೆಗಳು ಮತ್ತು ರಾಷ್ಟ್ರ ಪ್ರಜ್ಞೆ ೪೧

- ಡಾ. ಎಂ. ಎಸ್. ಮಾಗಣಗೇರಿ

೧೦. ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ ೫೦

- ಪ್ರೊ. ರಮೇಶ ಮ. ಕಲ್ಲನಗೌಡರ



Scanned with CamScanner

# ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ

• ಪ್ರೊ. ಬಿ. ಬಿ. ಡೆಂಗನವರ

ಜಾಗತೀಕರಣದ ಈ ಸಂದರ್ಭದಲ್ಲಿ ಮನುಷ್ಯ ಸರಕಾಗುತ್ತಿರುವ ಈ ದಿನಗಳಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಬಹು ಮಹತ್ವದ್ದಾಗಿದೆ. ಸಮೂಹ ಮಾಧ್ಯಮಗಳಲ್ಲಿ ಇಂದಿನ ಜಾಹೀರಾತಿನ ದಾಳಿ ತೀವ್ರವಾಗಿದೆ. ಸರಕು ಸಂಸ್ಕೃತಿಯ ಪ್ರಚಾರ ಹೆಚ್ಚಾಗಿದೆ. ಕೊಳ್ಳುಬಾಕು ಸಂಸ್ಕೃತಿಯನ್ನು ಹೆಚ್ಚಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರವೂ ಇದೆ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ಸಮೂಹ ಮಾಧ್ಯಮಗಳು ತಮ್ಮತನವನ್ನುಳಿಸಿಕೊಂಡು ನಮ್ಮ ನಾಡಿನ, ರಾಷ್ಟ್ರದ ಸಾಂಸ್ಕೃತಿಕ ನೆಲೆಗಳನ್ನುಳಿಸುತ್ತ, ಜನಪರವಾದ ಚರ್ಚೆಯನ್ನು ಪ್ರಾರಂಭಿಸುತ್ತ ಜನರ ಮಾಧ್ಯಮಗಳಾಗಬೇಕೆಂಬುದು ಎಲ್ಲರ ಇಚ್ಛೆಯಾಗಿದೆ. ಆದರೆ ಅದು ಅಷ್ಟು ಸುಲಭವಾದುದ್ದಲ್ಲ ಅನೇಕ ಸಮೂಹ ಮಾಧ್ಯಮಗಳು ಇಂದು ಉದ್ದಿಮೆಗಳಾಗಿ ಬೆಳೆದಿವೆ. ಉದ್ದಿಮೆಯಾಗಿ ಒಂದು ಮಾಧ್ಯಮ ಬೆಳೆದಾಗ ಅಲ್ಲಿ ಲಾಭ-ನಷ್ಟದ ಪ್ರಶ್ನೆಯೂ ಬರುತ್ತದೆ. ಈ ದೇಶದ ಉದ್ಯಮ ಪತಿಗಳು ಯಾರ ಪರವಾಗಿದ್ದಾರೆಂಬುದೂ ಇಲ್ಲಿ ಮುಖ್ಯವಾಗುತ್ತದೆ. ಸಮೂಹ ಮಾಧ್ಯಮಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿಯೇ ಇಷ್ಟೊಂದು ಸಂಕೀರ್ಣ ಸಮಸ್ಯೆಗಳಿರುವಾಗ ಈಗ ವಿದೇಶಿ ಚಾನಲ್‌ಗಳು ಲಗ್ಗೆ ಹಾಕಿವೆ. ವಿದೇಶಿ ಪತ್ರಿಕೆಗಳು ಪ್ರಾರಂಭವಾಗಲಿವೆ. ಇದುವರೆಗಿದ್ದ ಸಮಸ್ಯೆಗಳಿಗಿಂತ ಮುಂದಿನ ಸಮಸ್ಯೆಗಳು ಇನ್ನೂ ಭೀಕರವಾಗಿವೆ. ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಉಳಿವಿಗಾಗಿ ಪರಿಶ್ರಮಿಸಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಆದರ್ಶವಾಗಿದ್ದ, ಹೋರಾಟದ ಸಾಧನವಾಗಿದ್ದ ಪತ್ರಿಕೋಧ್ಯಮ; ಸ್ವಾತಂತ್ರ್ಯ ನಂತರದ ಭಾರತದಲ್ಲಿ ಒಂದು ಉದ್ಯಮವಾಗಿದೆ. ಬಂಡವಾಳ ಹೂಡಿ, ಲಾಭ ಗಳಿಸುವ ಲೆಕ್ಕಾಚಾರದ ಉದ್ಯಮ, ಜಾಹೀರಾತುಗಳ ಮೂಲಕ ಕೋಟ್ಯಾಂತರ ರೂಪಾಯಿಗಳ ಲಾಭ ಹರಿದು ಬರುವ ಈ ಉದ್ಯಮಬಂಡವಾಳದಾರರ ಬಾಯಿಯಲ್ಲಿ ನೀರೂರಿಸುವ ಉದ್ಯಮವೂ ಹೌದು ಹತ್ತಾರು ವರ್ಷಗಳಲ್ಲಿ ಹಣದ ಹೊಳೆಯನ್ನೆ ಹರಿಸುವ ಅಪಾರ ಪ್ರಭಾವವನ್ನು ಬೀರಬಲ್ಲ ಈ ಕ್ಷೇತ್ರಕ್ಕೆ ಧಾವಿಸಿ ಬರುವವರ



Scanned with CamScanner

ನೂಕುನುಗ್ಗಲನ್ನೇ ಕಾಣಬಹುದಾಗಿದೆ. ಅತ್ಯಾಧುನಿಕ ತಂತ್ರಜ್ಞಾನದ ಮೂಲಕ, ಅಪಾರ ಬಂಡವಾಳಗಳ ಮೂಲಕ ಸಮೂಹದ ನಡುವೆ ನಿಂತು ರಾಜಕೀಯ ಶಕ್ತಿಗಳನ್ನು ನಿಯಂತ್ರಿಸಬಲ್ಲ ರಾಜಕಾರಣಿಗಳನ್ನು ಚದುರಂಗದ ಕಾಯಿಗಳಂತೆ ನಡೆಸಬಲ್ಲ ಪತ್ರಿಕೋದ್ಯಮ ಬಂಡವಾಳದಾರರಿಗೆ ಅತ್ಯಾಕರ್ಷಕ ಕ್ಷೇತ್ರವೆನಿಸಿದೆ. ಪ್ರಾಚೀನ ರೋಮ್ ನಗರದಲ್ಲಿ ದೊಡ್ಡದೊಂದು ಪುಸ್ತಕದಲ್ಲಿ ಅಂದಂದಿನ ಮುಖ್ಯವಾದ ಸಮಾಚಾರವನ್ನು ಬರೆದು ಚಾವಡಿಯಲ್ಲಿ ಇಡುತ್ತಿದ್ದರು. ಅದಕ್ಕೆ "ದಿನವಾರ್ತೆ" ಎಂದು ಕರೆಯುತ್ತಿದ್ದರು. ಇದೇ ರೀತಿಯಲ್ಲಿ ಚೀನಾ ದೇಶದಲ್ಲಿ ವಿಶೇಷ ಸಂಗತಿಗಳನ್ನು ದೊಡ್ಡ ದೊಡ್ಡ ಹಾಳೆಗಳ ಮೇಲೆ ಬರೆಯಿಸಿ ಜನಸೇರುವ ಮುಖ್ಯವಾದ ಸ್ಥಳಗಳಲ್ಲಿ ಇಡುತ್ತಿದ್ದರು. ಚೀನಾ ದೇಶದ ಆಗೀನ ಆಡಳಿತಗಾರರು ಪ್ರಜೆಗಳಿಗೆ ಸರ್ಕಾರದ ಸಮಾಚಾರಗಳನ್ನು ತಿಳಿಸಲು ಪ್ರಕಟಿಸುತ್ತಿದ್ದರು. ಹಾಳೆಗಳಿಗೆ "ಚಿಂಗ್‌ಪೌ" (ಅರಮನೆಸುದ್ದಿ) ಎಂದು ಕರೆಯುತ್ತಿದ್ದರು. ಇಂದು ಪತ್ರಿಕೆಗಳು ಮಾಡುತ್ತಿರುವ ಸುದ್ದಿ ಪ್ರಸಾರದ ಕೆಲಸ ಈ ರೀತಿ ಹಿಂದಿನ ಕಾಲದಲ್ಲಿ ನಡೆಯುತ್ತಿತ್ತು.

ಆಗಿನ ಕಾಲದಲ್ಲಿ ಮುದ್ರಣ ಯಂತ್ರವಾಗಲಿ ಅಚ್ಚಿನ ಮೊಳೆಗಳಾಗಲಿ ಇರಲಿಲ್ಲ. ಚೀನಾ ದೇಶದಲ್ಲಿಯೇ ಇದು ಮೊದಲು ಪ್ರಾರಂಭವಾಯಿತೆಂದು ಹೇಳುತ್ತಾರೆ. ಈ ದೇಶಕ್ಕೆ ಸೇರಿದ "ಪಿ-ಷಿಂಗ್" ಎನ್ನುವ ಹೆಸರಿನ ಅಕ್ಕಸಾಲಿಗನೊಬ್ಬ ಸಣ್ಣ ಮರದ ತುಂಡುಗಳ ಮೇಲೆ ಅಕ್ಷರಗಳನ್ನು ಕೆತ್ತಿ ಅದನ್ನು ಕಾಗದಮೇಲೆ ಅಚ್ಚೊತ್ತುತ್ತಿದ್ದನಂತೆ. ಈ ರೀತಿ ತಯಾರಾದ ಪತ್ರಿಕೆಯೊಂದು ಕ್ರಿ.ಶ. ೬೧೮ನೇಯ ಇಸ್ವಿಯಲ್ಲಿ ಚೀನಾ ದೇಶದ "ಪೀಕಿಂಗ್" ಪಟ್ಟಣದಲ್ಲಿ ಪ್ರಕಟವಾಗುತ್ತಿತ್ತಂತೆ ಕಾಲಕ್ರಮೇಣ ಮುಂದೆ ಜರ್ಮನಿ ಮತ್ತು ಹಾಲೆಂಡ್ ದೇಶಗಳಲ್ಲಿ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ತಯಾರಿಸುವುದು ಮೊದಲಾಯಿತು. ಇಂಗ್ಲೇಂಡಿನವರು ಸೀಸದಿಂದ ಎರಕಹೊಯ್ದು ಅಕ್ಷರಗಳನ್ನು ತಯಾರಿಸುವ ವಿಧಾನವನ್ನು ಸುಮಾರು ೧೪೭೬ನೇಯ ಇಸ್ವಿಯ ವೇಳೆಗೆ ಕಂಡುಹಿಡಿದರು. ಇಂಗ್ಲೀಷಿನವರು ತಮ್ಮ ಕಾರ್ಯಚತುರತೆಯಿಂದಲೂ ಬುದ್ಧಿಶಕ್ತಿಗಳಿಂದಲೂ ಮುದ್ರಣ ಕಲೆಯನ್ನು ಅಗಾಧವಾಗಿ ಬೆಳೆಸಿದರು. ಪ್ರಪಂಚದ ಮೊಟ್ಟಮೊದಲ ವೃತ್ತ ಪತ್ರಿಕೆ ೧೬೧೫ ರಲ್ಲಿ ಜರ್ಮನಿಯಲ್ಲಿ ಪ್ರಕಟವಾಯಿತು. ಆದರೆ ವೃತ್ತ ಪತ್ರಿಕೆಗಳು ಸರಿಯಾದ ರೂಪತಾಳಿ ಚೆನ್ನಾಗಿ ಬೆಳೆದು ಪ್ರಕಟವಾಗತೊಡಗಿದ್ದು, ಇಂಗ್ಲೇಂಡನಲ್ಲಿ, ಇಂಗ್ಲೇಂಡನಲ್ಲಿ ಪ್ರಾರಂಭವಾದ ವೃತ್ತ ಪತ್ರಿಕಾ ಪ್ರಕಟಣೆ ಪ್ರಪಂಚಕ್ಕೆಲ್ಲಾ ಮಾದರಿಯಾಯಿತು. ಇಂಗ್ಲೇಂಡಿನ ಮೊಟ್ಟ ಮೊದಲ ದಿನ ಪತ್ರಿಕೆ "ಪರಫೆಕ್ಟ್ ಡಯರ್ನಲ್" ೧೬೬೦ರಲ್ಲಿ ಹುಟ್ಟಿತು ಆದರೆ ಅದು ಬರೀ ಇಪ್ಪತ್ತನಾಲ್ಕು ದಿನಗಳು ಮಾತ್ರ ಅದರ ಆಯುಷ್ಯ ಆನಂತರ "ನಥನಿಯತ್ ಬಟರ್" ಎನ್ನುವ ವ್ಯಕ್ತಿ ಒಂದೇ ಹಾಳೆಯ ಸೂಕ್ತ ಶೀರ್ಷಿಕೆಗಳಿರುವ ಸುದ್ಧಿ ತುಂಬಿದ ಪತ್ರಿಕೆಯೊಂದನ್ನು ವಾರಕೊಮ್ಮೆ ತಪ್ಪದೆ



Scanned with CamScanner

೧೬೬೨ ರಿಂದ ಪ್ರಕಟಗೊಳ್ಳಲಾರಂಭಿಸಿತು. ಮುಂದೆ ೧೭೦೨ರಲ್ಲಿ ಪ್ರಾರಂಭವಾದ "ಡೇಲಿ ಕುರಾಂಟ್" ಎಂಬ ದಿನಪತ್ರಿಕೆ ಇಂಗ್ಲೇಂಡಿನಲ್ಲಿ ಅತೀ ಯಶಸ್ವಿ ದಿನಪತ್ರಿಕೆಯೆನಿಸಿತು. ಪ್ರಪಂಚದಲ್ಲೆಲ್ಲಾ ಇಂಗ್ಲೀಷ ಭಾಷೆ ಹರಡಲು ಇವೆಲ್ಲ ಬಹುಮಟ್ಟಿಗೆ ಸಹಾಯಮಾಡಿದವು ಐವತ್ತು ಅರವತ್ತು ಸಾವಿರ ಪತ್ರಿಕೆಗಳು ಈಗ ಅಲ್ಲಿ ಪ್ರಕಟಗೊಳ್ಳುತ್ತಿವೆ. ಕೋಟ್ಯಾಂತರ ಪತ್ರಿಕೆಗಳು ಖರ್ಚಾಗುತ್ತವೆ. ಜನಮನವನ್ನು ಮುಟ್ಟುವ ಅದೊಂದು ಲಾಭದಾಯಕ ಉದ್ದಿಮೆಯಾಗಿ ಬೆಳೆದಿದೆ.

ಅಮೇರಿಕಾದಲ್ಲಿ ಬ್ರಿಟಿಷರ ಪ್ರಾಬಲ್ಯ ವಿರುವವರೆವಿಗೂ ಅಲ್ಲಿ ಪತ್ರಿಕೆಗಳ ಪ್ರಕಟಣೆ ಅಸಾಧ್ಯವಾಗಿತ್ತು. ಆದರೆ ಆಮೇಲೆ ಅಮೇರಿಕನ್ನರು ರೊಚ್ಚಿಗೆದ್ದು ಸ್ವಾತಂತ್ರ್ಯವಾದ ಮೇಲೆ ಅಲ್ಲಿ ಪತ್ರಿಕೋದ್ಯಮ ಚೆನ್ನಾಗಿ ಪ್ರಾರಂಭವಾಯಿತು. ಅಲ್ಲಿ ಈಗ ಪತ್ರಿಕೋದ್ಯಮ ಅತೀ ಲಾಭದಾಯಕ ಉದ್ಯಮವಾಗಿ ಬೆಳೆದಿದೆ. ಮಾಧ್ಯಮ ದೊರೆ ಎಂದೆ ಕರೆಯಿಸಿಕೊಳ್ಳುವ "ರುಪರ್ಟಮುರ್ಡೋಕ್" ಹೆಸರನ್ನು ಕೇಳದವರು ಇರಲಿಕ್ಕಿಲ್ಲ. ಮಾಧ್ಯಮ ಲೋಕದಲ್ಲಿ ವಿಲಿಯಮ್ ರ್‍ಯಾಂಡಾಲ್ಫ್ ಹರ್ಸ್ಟ್ ಅಥವಾ ಜೋಸೆಫ್ ಪುಲಿಟ್ಜರ್ ನಷ್ಟೆ ಜನಪ್ರಿಯವಾಗಿರುವ ಮುರ್ಡೋಕ್, ತಾನು ಹೊಂದಿರುವ ಪತ್ರಿಕೆ, ಟಿವ್ಹಿ ಚಾನೆಲ್, ರೆಡಿಯೋ ಸ್ಟೇಷನ್, ಇಂಟರನೇಟ್ ಕಂಪನಿಗಳ ಮೂಲಕ ಜಗತ್ತಿನ ಅಭಿಪ್ರಾಯಗಳನ್ನು ಬದಲಿಸಬಲ್ಲ ಅಥವಾ ರೂಪಿಸಬಲ್ಲ ಇಷ್ಟೊಂದು ಪ್ರಭಾವಶಾಲಿ ವ್ಯಕ್ತಿ ಮತ್ತೊಬ್ಬರಿರಲಿಕ್ಕಿಲ್ಲ. ಸಮೂಹಮಾಧ್ಯಮ ರಂಗದಲ್ಲಿ ದೈತ್ಯ ಶಕ್ತಿಯಾಗಿ ಹೊರಹೊಮ್ಮಿರುವುದು ಅವರ ಮಾಧ್ಯಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತದೆ. ಯಾರೊ ಸುಮ್ಮನೆ ಕರೆದ ಮಾತ್ರಕ್ಕೆ "ರುಪರ್ಟ ಮುರ್ಡೋಕ್" "ಮಾಧ್ಯಮ ದೊರೆ" ಆದವನಲ್ಲ. ಇಂದು ವಿಶ್ವದಲ್ಲಿ "ಮಾಧ್ಯಮ ದೊರೆ" ಪಟ್ಟ ಯಾರಿಗಾದರೂ ಇದ್ದರೆ ಅದು ಅವನಿಗೆ ಮಾತ್ರ, ಆ ಹೆಸರಿಗೆ ಮುರ್ಡೋಕ್ ಅನ್ವರ್ಥಕ ಪೂರ್ವಜರೋ ಅಥವಾ ಮತ್ಯಾರೋ ಕಟ್ಟಿಟ್ಟ ಸಾಮ್ರಾಜ್ಯವಲ್ಲ ಸ್ವತಃ ಮುರ್ಡೋಕ್‌ನೇ ಕಟ್ಟಿ ಬೆಳೆಸಿದ್ದು, ನ್ಯೂಯಾರ್ಕಪೋಸ್ಟ್, ಲಂಡನ್ ಟೈಮ್ಸ್, ದಿ ಸಂಡೇ ಟೈಮ್ಸ್, ದಿ ಸನ್, ದಿವಾಲ್ ಸ್ಟ್ರೀಟ್ ಜರ್ನಲ್ ಸೇರಿದಂತೆ ಸುಮಾರು ೧೭೫ ಪತ್ರಿಕೆಗಳ ಮಾಲೀಕನಾಗಿರುವುದು ಮುರ್ಡೋಕ್ ಇಪ್ಪತ್ತೇನಯ ಶತಮಾನದ ಪ್ಯಾಕ್ಸ್ ನ್ಯೂಸ್ ಒಡಯನಾಗಿದ್ದಾನೆ. ಯೂರೋಪಿನಲ್ಲಿ ಮುದ್ರಣ ತಂತ್ರಜ್ಞಾನ ಅಭಿವೃದ್ಧಿಗೊಂಡಂತೆ ಭಾರತದಲ್ಲಿ ಪ್ರಕಟಣೋದ್ಯಮ ಶುರುವಾದದ್ದು, ಕ್ರೈಸ್ತ ಧರ್ಮ ಪ್ರಚಾರ ಹಾಗೂ ಈಸ್ಟ್ ಇಂಡಿಯಾ ಕಂಪನಿಯ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿಯೇ ಬ್ರಿಟೀಷರ ಹಿತಾಸಕ್ತಿ ರಕ್ಷಣೆಗಾಗಿಯೇ ಭಾರತದಲ್ಲಿ ಹುಟ್ಟಿಕೊಂಡ ಪತ್ರಿಕೋದ್ಯಮ ಹೆಚ್ಚುಕಾಲ ಬ್ರಿಟಿಷರ ಸೇವಾನುವರ್ತಿಯಾಗಿ ಉಳಿಯಲಿಲ್ಲ ಪತ್ರಿಕೆಗಳು ಬಲುಬೇಗ ಈಸ್ಟ ಇಂಡಿಯಾ ಕಂಪನಿ ಮತ್ತು ಬ್ರೀಟಿಷ ಆಡಳಿತವನ್ನು ಟೀಕಿಸಲಾರಂಭಿಸಿದವು. ಭಾರತದಲ್ಲಿ ಪತ್ರಿಕೋದ್ಯಮ ಯುಗಕ್ಕೆ ನಾಂದಿಹಾಡಿದ ಪತ್ರಿಕೆ "ಬೆಂಗಾಲ್ ಗೆಜಿಟ್" ಈ ಪತ್ರಿಕೆ ಆರಂಭವಾದದ್ದು ೧೭೮೦ರಲ್ಲಿ ಇದರ ಸಂಪಾದಕ ಆಂಗ್ಲ



Scanned with CamScanner

ಪ್ರಜೆ ಜೇಮ್ಸ್ ಅಗಸ್ಟಸ್ ಹಿಕ್ಕಿ, ಬೆಂಗಾಲ್ ಗೆಜೆಟ್, ಹಿಕ್ಕಿ ಗೆಜೆಟ್ ಎಂದೇ ಆಗ ಪ್ರಖ್ಯಾತವಾಗಿತ್ತು. ನಿಧಾನವಾಗಿ ಸರ್ಕಾರವನ್ನು ಬೆಂಬಲಿಸುವ ಕೆಲವು ಪತ್ರಿಕೆಗಳು ಹುಟ್ಟಿಕೊಂಡವು ಆ ಪತ್ರಿಕೆಗಳನ್ನು ನಡೆಸುತ್ತಿದ್ದವರೆಲ್ಲಾ ಇಂಗ್ಲೀಷಿನವರೆ ಆನಂತರ ಪತ್ರಿಕಾ ಪ್ರಕಟಣೆ ಭಾರತದ ಅನೇಕ ಮುಖ್ಯ ಪಟ್ಟಣಗಳಲ್ಲಿ ಪ್ರಾರಂಭವಾಯಿತು, ಕಲ್ಕತ್ತಾ, ಮುಂಬಯಿ, ಮದರಾಸು ಮೊದಲಾದ ಸ್ಥಳಗಳಲ್ಲಿ ಇಂಗ್ಲೀಷ ಪತ್ರಿಕೆಗಳು ಪ್ರಾರಂಭವಾಗಿ ಭಾರತೀಯ ಪತ್ರಿಕೋದ್ಯಮಕ್ಕೆ ಭದ್ರಬುನಾದಿಯನ್ನು ಹಾಕಿದವು ಈ ಪತ್ರಿಕೆಗಳು ಮುಖ್ಯವಾಗಿ ಯೂರೋಪಿಯನ್ ಜನರಿಗಾಗಿಯೇ ಮೀಸಲಾಗಿದ್ದು, ಅವರ ಬೇಡಿಕೆಗಳನ್ನು ಪೂರೈಸುವಲ್ಲಿ ಆಸಕ್ತಿ ವಹಿಸುತ್ತಿದ್ದವು.

ಇಂಗ್ಲೀಷ ಪತ್ರಿಕೆಗಳು ಪ್ರಕಟವಾಗುತ್ತಿರವುದನ್ನು ನೋಡಿ ಪತ್ರಿಕೆ ಎನ್ನವುದು ಎಂಥಹ ಬಲಿಷ್ಟ ಮಾಧ್ಯಮ ಎನ್ನುವುದು ತಿಳಿದ ಕೂಡಲೇ ಭಾರತೀಯರನೇಕರು ಪತ್ರಿಕಾ ಪ್ರಕಟಣೆಯ ಸಾಹಸಕ್ಕೆ ಕೈಹಾಕಿದರು. ಇಂಗ್ಲೀಷ ಎದುರು ಭಾರತದವರನ್ನು ಎತ್ತಿಕಟ್ಟಲು ದೇಶದಲ್ಲೆಲ್ಲಾ ವೃತ್ತ ಪತ್ರಿಕೆಗಳ ಅವಶ್ಯಕತೆಉಂಟಾಯಿತು. ಬಂಗಾಲಿ, ಗುಜರಾತಿ, ಮರಾಠಿ ಭಾಷೆಗಳಲ್ಲಿ ಪತ್ರಿಕೆಗಳು ಹುಟ್ಟಿಕೊಂಡವು ಸರ್ಕಾರವನ್ನು ಟೀಕಿಸುವ ಕ್ರಾಂತಿಕಾರಿ ಪತ್ರಿಕೆಗಳು ಪ್ರಕಟವಾಗತೊಡಗಿದವು. ಬಂದೂಕು ಹಿಡಿದುನಿಂತ ಇಂಗ್ಲೀಷ ಸರ್ಕಾರವನ್ನು ಲೇಖನಿ ಹಿಡಿದು ನಿಂತ ಭಾರತೀಯರು ತಾವು ಚೆಲ್ಲುತ್ತಿದ್ದ ಮಸಿಗೆ ಸಮನಾಗಿ ತಮ್ಮ ರಕ್ತವನ್ನು ಚೆಲ್ಲಿದರು. ಮಿಷನರಿಗಳು ಇಂಗ್ಲೇಂಡಿನಿಂದಲೂ, ಜರ್ಮನಿಯಿಂದಲೂ ಕನ್ನಡ ಪ್ರದೇಶಗಳಲ್ಲಿ ಕೆಲಸ ಮಾಡಲು ಸುಮಾರು ನೂರಾಐವತ್ತು ವರ್ಷಗಳ ಹಿಂದೆ ಬಂದರು. ಇವರು ತಮ್ಮ ಮತ ಪ್ರಚಾರಕ್ಕೆ ಪುಸ್ತಕಗಳನ್ನು ಪ್ರಕಟಿಸಲು ಕನ್ನಡ ನಾಡಿನಲ್ಲಿ ಮುದ್ರಣಯಂತ್ರಗಳನ್ನು ಸ್ಥಾಪಿಸಿದರು. ಕನ್ನಡ ಅಕ್ಷರಗಳ ಮೊಳೆಗಳನ್ನು ತಯಾರಿಸಿದರು. ೧೮೬೦ರಲ್ಲಿ ಬಳ್ಳಾರಿಯಲ್ಲಿ ಮೊದಲ ಮುದ್ರಣಾಲಯ ಸ್ಥಾಪಿತವಾಯಿತು. ಮುಂದೆ ಮಿಷನರಿಗಳು ಬೆಂಗಳೂರು, ಮಂಗಳೂರು, ಮೈಸೂರು ನಗರಗಳಲ್ಲೂ ಮುದ್ರಣಾಲಯಗಳನ್ನು ಪ್ರಾರಂಭಿಸಿದರು. ಭಾಷಲ್ ಮಿಷನ್ ಎಂದು ಪ್ರಸಿದ್ಧರಾದ ಜರ್ಮನ್ ಪಾದ್ರಿಗಳು ಕನ್ನಡದ ಮೊದಲ ಪತ್ರಿಕೆಯ ಸ್ಥಾಪನೆಗೂ ಕಾರಣರಾದರೂ "ಮಂಗಳೂರು ಸಮಾಚಾರ" ಎನ್ನುವ ಈ ಪತ್ರಿಕೆ ೦೧-೦೭-೧೮೪೩ ರಿಂದ ಮಂಗಳೂರಿನಲ್ಲಿ ಪ್ರಕಟಣೆ ಪ್ರಾರಂಭಿಸಿತು. "ರೆವರೆಂಡ್ ಹರ್ಮನ್ ಮೊಗ್ಲಿಂಗ್ ಅವನೇ ಈ ಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕನಾಗಿದ್ದನು. ನಾಲ್ಕು ಪುಟಗಳ ಈ ಪತ್ರಿಕೆ ಹದಿನೈದು ದಿನಕ್ಕೊಮ್ಮೆ ಪ್ರಕಟವಾಗುತ್ತಿತ್ತು. "ಬೆಳಗಾಂ ಸಮಾಚಾರ" ಎನ್ನುವ ಮರಾಠಿ ವಾರಪತ್ರಿಕೆ ೧೮೮೩ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾದದ್ದು ಇಂದಿಗೂ ಪ್ರಕಟವಾಗುತ್ತಿದೆ.

ಕನ್ನಡದ ಮೊದಲ ಮಾಸಪತ್ರಿಕೆ "ಹಿತಬೋಧಿನಿ" ೧೮೮೧ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾಯಿತು. "ರಾಮಾನುಜಅಯ್ಯಂಗಾರ" ಎನ್ನುವವರು ಸಂಸ್ಥಾಪಕ ಸಂಪಾದಕರಾಗಿದ್ದರು. ೧೮೮೫ರಲ್ಲಿ ಎಂ ವೆಂಕಟಕೃಷ್ಣಯ್ಯನವರು

“ವೃತ್ತಾಂತ ಚಿಂತಾಮಣಿ” ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಎಂ.ವೆಂಕಟಕೃಷ್ಣಯ್ಯನವರು ಬರೀ ಒಂದು ಪತ್ರಿಕೆಯಿಂದಲೇ ತೃಪ್ತರಾಗಲಿಲ್ಲ ಇಂಗ್ಲೀಷ ಹಾಗೂ ಕನ್ನಡ ಸೇರಿ ಸುಮಾರು ಹತ್ತು ಪತ್ರಿಕೆಗಳನ್ನು ಪ್ರಾರಂಭಿಸಿದರು. “ವೇದಾಂತ ಚಿಂತಾಮಣಿ”, “ಸಂಪದಭ್ಯುದಯ”, “ಸಾಧ್ವಿ” ಪೂರ್ಣ ಸಾಮಾಜಿಕ ಪತ್ರಿಕೆ ಎಂದು ಕನ್ನಡದಲ್ಲಿ “ಮೈಸೂರು ಪೆಟ್ರಿಯಟ್” “ವೆಲ್ತ ಆಫ್ ಮೈಸೂರು” “ನೇಚರ್ ಕ್ಯೂರ್” ಮತ್ತು “ಮೈಸೂರ ಹೆರಾಲ್ಡ್” ಎಂಬ ಇಂಗ್ಲೀಷಿನಲ್ಲೂ ಪತ್ರಿಕೆಗಳನ್ನು ಪ್ರಾರಂಭಿಸಿದರು. ಹತ್ತೊಂಬತ್ತೇನೆಯ ಶತಮಾನದಲ್ಲಿ ಜೇಮ್ಸ್‌ಸಿಲ್ಕ್ ಬಕಿಂಗ್‌ಹ್ಯೂಮನ್ ಆಗಮನದೊಂದಿಗೆ ಭಾರತದಲ್ಲಿ ನಿಜವಾದ ಸ್ವಾತಂತ್ರ ಪತ್ರಿಕೋದ್ಯಮ ಶುರುವಾಯಿತು ಪಂಡಿತ್ ಜವಾಹರಲಾಲ್ ನೆಹರೂ ಅವರು ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯೂಮ್‌ನನ್ನು “ಪತ್ರಿಕಾ ಸ್ವಾತಂತ್ರದ ಹರಿಕಾರ ಎಂದು ವರ್ಣಿಸಿದರು. ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯಾಮ್ “ಕಲ್ಕತ್ತಾ ಕ್ರಾನಿಕಲ್ಸ್ ಸಂಪಾದಕನಾಗಿ ೧೮೧೮ರಲ್ಲಿ ಭಾರತಕ್ಕೆ ಬಂದನು “ಕಲ್ಕತ್ತಾ ಕ್ರಾನಿಕಲ್” ಪತ್ರಿಕೆ ಬಕಿಂಗ್ ಹ್ಯಾಮ್ ಸಂಪಾದಕತ್ವದಲ್ಲಿ ರಾಜಕೀಯ, ವಾಣಿಜ್ಯ, ಸಾಂಸ್ಕೃತಿಕ ಪತ್ರಿಕೆಯಾಗಿ, ಓದುಗರ ವಾಣಿಯಾಗಿ ಬೀದಿಗೆ ಬಂದು ವಾಚಕರವಾಹಿನಿ ಅಂಕಣ “ಕಲ್ಕತ್ತಾ ಕ್ರಾನಿಕಲ್” ಮುಖ್ಯ ಆಕರ್ಷಣೆಯಾಗಿತ್ತು. “ಕಲ್ಕತ್ತಾ ಕ್ರಾನಿಕಲ್” ವಾರದಲ್ಲಿ ಎರಡುದಿನ ಪ್ರಕಟಗೊಳ್ಳುವ ಎಂಟು ಪುಟಗಳ ಪತ್ರಿಕೆಯಾಗಿತ್ತು. ಇದೇ ಕಾಲಕ್ಕೆ ಭಾರತದ ಪತ್ರಿಕಾ ದಿಗಂತದಲ್ಲಿ ಮಿನಗುತಾರೆ, ರಾಜಾರಾಮ್ ಹೋಹನ್ ರಾಯ್ ೧೮೨೧ರಲ್ಲಿ “ಸಂವಾದ ಕೌಮುದಿ” ಎಂಬ ಪತ್ರಿಕೆ ಶುರುಮಾಡಿದರು. ಇವರು ಪತ್ರಿಕೋದ್ಯಮದಲ್ಲಿ ಪಾದಾರ್ಪಣೆ ಮಾಡಿದ ಮೊದಲ ಭಾರತೀಯ ಎಂದೇ ಪಂಡಿತ್ ಜವಾಹರಲಾಲ್ ನೆಹರು ಅವರು ರಾಜಾರಾಮ್ ಮೋಹನ್ ರಾಯ್ ಅವರನ್ನು ಭಾರತೀಯ ಪತ್ರಿಕೋಧ್ಯಮದ ಪಿತಾಮಹ ಎಂದು ಕರೆದಿದ್ದಾರೆ. ಮೋಹನರಾಯ್ ಅವರು ಪತ್ರಿಕೆಗಳನ್ನು ಸಮಾಜಸುಧಾರಣೆಯ ಸಾಧನವನ್ನಾಗಿ ಬಳಸಿದರು. ರಾಜಾರಾಮ್ ಬಹುಭಾಷಾ ವಿಶಾರದರಾಗಿದ್ದರಿಂದ ಕೆಲವು ವರ್ಷ “ಮಿರತ್ ಉಲ್ ಅಕ್ಬರ್” ಎಂಬ ಉರ್ದು ಪತ್ರಿಕೆಯನ್ನು ಸ್ವಲ್ಪಕಾಲ ನಡೆಸಿದರು. “ದಿ ಬಾಂಬೆ ಸಮಾಚಾರ” ಎಂಬ ಗುಜರಾತ ಪತ್ರಿಕೆ ೧೮೨೨ರಲ್ಲಿ ಶುರುವಾಯಿತು. ಆನಂತರ “ಮುಂಬಯಿ ವರ್ತಮಾನ” (೧೮೩೦) “ಜನ್-ಎ-ಜಮ್‌ಶೆತ್” (೧೮೩೧) “ಬಾಂಬೆದರ್ಪಣ” (೧೮೫೦) ಮೊದಲಾದ ಪತ್ರಿಕೆಗಳು ಬೆಳಕು ಕಂಡವು “ದಿ ಅಮೃತ ಬಜಾರ್” (೧೮೬೮) “ದಿ ಸ್ಟೇಟ್ಸ್ ಮನ್” (೧೮೭೫) “ದಿ-ಹಿಂದೂ” (೧೮೬೧) ಅಮೃತ ಬಿಂದು ಮತ್ತು ಸ್ಟೇಟ್ಸ್ ಮನ್ ಪತ್ರಿಕೆಗಳು ಕಲ್ಕತ್ತೆಯಿಂದ ಪ್ರಕಟಣೆಗೊಂಡರೆ, ಟೈಮ್ಸ್ ಆಫ್ ಇಂಡಿಯಾ ಮುಂಬಯಿಯಲ್ಲಿ ಪ್ರಾರಂಭವಾಯಿತು. ದಿ ಹಿಂದೂ ಆಗೀನ ಮದ್ರಾಸಿನಲ್ಲಿ ಆರಂಭವಾಯಿತು ಇಂದಿಗೂ ಇವು ಭಾರತದ ಪ್ರಮುಖ ಪತ್ರಿಕೆಗಳಾಗಿದ್ದು ದೇಶದ ಹಲವು ಸ್ಥಳಗಳಿಂದ ಮುದ್ರಿತಗೊಳ್ಳುತ್ತಿವೆ. ಹೋರಟಗಾರ ಬಾಲಗಂಗಾಧರ



Scanned with CamScanner

ತಿಲಕರು ೧೮೮೧ರ ಜನವರಿ ೨ ರಂದು ಪುಣೆಯಲ್ಲಿ "ಕೇಸರಿ" ಪತ್ರಿಕೆ ಆರಂಭಿಸಿದರು. "ಕೇಸರಿ" ಬಲುಬೇಗ ರಾಷ್ಟ್ರೀಯ ಪತ್ರಿಕೆಯಾಗಿ ಬೆಳೆಯಿತು. ಸ್ವಾತಂತ್ರ್ಯ ಹೋರಾಟ "ಕೇಸರಿ"ಯ ಮುಖ್ಯ ಗುರಿಯಾಗಿತ್ತು ಬ್ರಿಟೀಷರ ದೌರ್ಜನ್ಯಗಳನ್ನು ಬ್ರಿಟೀಷ ಸರ್ಕಾರದ ನೀತಿಗಳನ್ನು ಉಗ್ರವಾಗಿ ಖಂಡಿಸಿ ಲೇಖನಗಳನ್ನು ಬರೆದುದ್ದಕ್ಕಾಗಿ ೧೯೦೮ರಲ್ಲಿ ಆಂಗ್ಲ ಸರ್ಕಾರ ತಿಲಕರನ್ನು ಆರು ವರ್ಷಗಳಕಾಲ ಜೈಲಿಗೆ ಹಾಕಿತು. "ಕೇಸರಿ" ಪ್ರಭಾವದಿಂದ ಕರ್ನಾಟಕದ ಬೆಳಗಾವಿಯಲ್ಲಿ ಕರ್ಮವೀರ ಪ್ರಾರಂಭಗೊಂಡಿತು. ಭಾರತದಾದ್ಯಂತ ಅನೇಕ ಪತ್ರಿಕೆಗಳಿಗೆ "ಕೇಸರಿ" ಸ್ಫೂರ್ತಿಯಾಯಿತು. ಭಾರತೀಯ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮನ್ನು ಮುಡುಪಾಗಿಸಿಕೊಂಡವು. ಸ್ವಾತಂತ್ರ್ಯ ಹೋರಾಟದ ಪ್ರಬಲ ಅಸ್ತ್ರಗಳಾದವು. ಇದೇ ಸಮಯದಲ್ಲಿ ಹಲವಾರು ಹೊಸ ಪತ್ರಿಕೆಗಳು ಹುಟ್ಟಿಕೊಂಡವು ಕಲ್ಕತ್ತೆಯ "ಬಂಗ್ಲಾರ ಕಥಾ" ಮದ್ರಾಸಿನ "ಸ್ವದೇಶಿ ಮಿತ್ರನ್" ನವದೆಹಲಿಯ ಹಿಂದೂಸ್ತಾನ ಟೈಮ್ಸ್ ಪ್ರತಾಪ್ ಮೊದಲಾದವುಗಳು. ತುರ್ತುಪರಿಸ್ಥಿತಿಯ ನಂತರ ಪತ್ರಿಕೆಗಳು ಮತ್ತಷ್ಟು ಕ್ರಿಯಾಶೀಲವಾದವು.

ಮುಂಬಯಿ ಕರ್ನಾಟಕದ ಮೊದಲ ಪತ್ರಿಕೆ ಎನ್ನಲಾದ ಹಿತೇಚ್ಛು ೧೮೭೦ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾಯಿತು. ೧೮೯೯ರಲ್ಲಿ ಧಾರವಾಡದಲ್ಲಿ "ಲೋಕಬಂಧು" ಶುರುವಾಯಿತು. ೧೮೯೯ರಲ್ಲಿ "ಕೊಡಗು ಚಂದ್ರಿಕೆ" ಪ್ರಾರಂಭವಾಯಿತು ಮೈಸೂರು ರಂಗರಾಯ ಎಂಬುವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ೧೮೮೮ರಲ್ಲಿ "ಲೋಕ ಶಿಕ್ಷಕ" ಎಂಬ ಪತ್ರಿಕೆಯನ್ನು ವೆಂಕಟರಂಗೋಕಟ್ಟಿ ಪ್ರಾರಂಭಿಸಿದರು. ೧೮೯೬ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾ ವರ್ಧಕ ಸಂಘದ "ವಾಗ್ಭೂಷಣ" ಎಂಬ ಪತ್ರಿಕೆ ಆರಂಭಿಸಿತು. ಕನ್ನಡದಲ್ಲಿ ಹೊಸ ಲೇಖಕರನ್ನು ಸೃಷ್ಟಿಸಿದ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಮೊದಲ ಪತ್ರಿಕೆ "ವಾಗ್ಭೂಷಣ" ವಿದ್ಯಾರ್ಥಿನಿಯರು ಮತ್ತು ಮಹಿಳೆಯರಿಗೆ ಮೀಸಲ್ಾದ ಕರ್ನಾಟಕ ವಾಣಿ ವಿಲಾಸ ೧೮೮೮ರಲ್ಲಿ ಮೈಸೂರಿನಲ್ಲಿ "ವಿದ್ಯಾದಾಯಿನಿ" ೧೮೯೩ರಲ್ಲಿ ಮೈಸೂರಿನಲ್ಲಿ ಎಂ ಶಾಮರಾಯ ಎಂಬುವರಿಂದ ಪ್ರಾರಂಭವಾಯಿತು. ೧೮೫೦ರಲ್ಲಿ ಮೈಸೂರಿನಲ್ಲಿ ಮೊತ್ತಮೊದಲ ಮುದ್ರಣಾಲಯ ಕಾರ್ಯಾರಂಭ ಮಾಡಿತು. ಮೈಸೂರಿನ ಪ್ರಕಟವಾದ ಮೊದಲ ಪತ್ರಿಕೆ ಬೆಂಗಳೂರು ಹೆರಾಲ್ಡ್ (೧೮೫೯) ಜೇಮ್ಸ್ ಎಂಬುವರು ಇದರ ಸಂಪಾದಕರಾಗಿದ್ದರು., ೧೮೬೨ರಲ್ಲಿ ಬಿ. ಎಸ್. ರೈಸ್ ಅವರು ಸಂಪಾದಕತ್ವದಲ್ಲಿ ಅರುಣೋದಯ ಆರಂಭವಾಯಿತು. ೧೮೮೫–೧೯೦೦ರ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಹಲವಾರು ಪತ್ರಿಕೆಗಳು ಬೆಳಕನ್ನು ಕಂಡವು "ಲೋಕ ಶಿಕ್ಷಣ" ಕರ್ನಾಟಕ ವೃತ್ತ" ಲೋಕ ಬಂಧು" "ಕನ್ನಡ ಸಿಂಹ" "ಚಂದ್ರೋದಯ" "ಕನ್ನಡ ಕೇಸರಿ" ಅವುಗಳಲ್ಲಿ ಮುಖ್ಯವಾದವು ಮುದವೀಡು ಕೃಷ್ಣರಾಯರು ಇವೆಲ್ಲದರ ಹಿಂದಿನ ಪ್ರೇರಕ ಶಕ್ತಿಯಾಗಿದ್ದರು. "ಕರ್ನಾಟಕ ವೈಭವ" ಉತ್ತರ ಕರ್ನಾಟಕದ



Scanned with CamScanner

ಮತ್ತೊಂದು ಪ್ರಸಿದ್ಧ ಪತ್ರಿಕೆ ೧೮೯೨ರಲ್ಲಿ ವಿಜಯಪುರದಲ್ಲಿ ಮಣ್ಣೂರ ಗೋವಿಂದರಾಯರು ಈ ಪತ್ರಿಕೆಯನ್ನು ಪ್ರಾರಂಭಿಸಿದರು. ೧೯೨೨ರಲ್ಲಿ ಮೊಹರೆ ಹಣಮಂತರಾಯರು ಇದರ ಮಾಲೀಕತ್ವ ಮತ್ತು ಸಂಪಾದಕತ್ವ ವಹಿಸಿಕೊಂಡರು. ಸ್ವಾತಂತ್ರ್ಯ ಸಮರಕ್ಕೆ ಮುಖ್ಯವಾಹಿನಿಯಂತಿದ್ದ ಈ ಪತ್ರಿಕೆ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ೧೯೨೧ರಲ್ಲಿ ರಂಗನಾಥ ದಿವಾಕರರ ಸಂಪಾದಕತ್ವದಲ್ಲಿ "ಕರ್ಮವೀರ" ವಾರ ಪತ್ರಿಕೆ ಹುಟ್ಟಿತು. ಈಗಲೂ ಇದು ಲೋಕ ಕಲ್ಯಾಣ ಟ್ರಸ್ಟ್ ವತಿಯಿಂದ ಹುಬ್ಬಳ್ಳಿ-ಬೆಂಗಳೂರುಗಳಿಂದ ಪ್ರಕಟವಾಗುತ್ತಿದೆ. "ಸಂಯುಕ್ತ ಕರ್ನಾಟಕ" (೧೯೨೯) ಆರಂಭದಲ್ಲಿ ವಾರ ಪತ್ರಿಕೆಯಾಗಿ ಬೆಳಗಾವಿಯಿಂದ ಪ್ರಕಟಣೆ ಪ್ರಾರಂಭಿಸಿತು. ರಂಗನಾಥ ದಿವಾಕರ ದತ್ತೋಪಂಥ ಬೆಳವಿ ನಾರಾಣರಾವ್ ಜೋಶಿ ಮತ್ತು ದಾತಾರ ಬಳವಂತ ರಾಯರು ಸಂಯುಕ್ತ ಕರ್ನಾಟಕದ ಸಂಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ೧೯೩೦ರಲ್ಲಿ ಸೇವಾದಳದ ಸಂಸ್ಥಾಪಕರಾದ ಎಸ್. ಎಸ್. ಹರ್ಡಿಕರ್ ಪ್ರಾರಂಭಿಸಿದ "ಹುಬ್ಬಳ್ಳಿ ಗೆಜೆಟ್" ಹುಬ್ಬಳ್ಳಿಯ ಪೌರಸಮಸ್ಯೆಗಳಿಗೆ ಮೀಸಲಾದ ಪತ್ರಿಕೆಯಾಗಿತ್ತು ೧೯೪೦ರಲ್ಲಿ "ಜೈ ಹಿಂದ" ಎಂದು ಹೊಸನಾಮಕರಣ ಮಾಡಿ ಪತ್ರಿಕೆಯನ್ನು ಮುಂದುವರಿಸಿದ್ದು ಪವಾಡವೇ ಸರಿ. "ವಿಶ್ವ ಕರ್ನಾಟಕ" ಪತ್ರಿಕೆಯನ್ನು ೧೯೨೧ರಲ್ಲಿ ತಿರುಮಲ ತಾತಾ ಚಾರ್ಯಶರ್ಮರು ವಾರಪತ್ರಿಕೆಯಾಗಿ ಪ್ರಾರಂಭಿಸಿದರು. ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯವನ್ನು ಮುಖ್ಯಧ್ಯೇಯವಾಗಿ ಹೊಂದಿದ ಈ ಪತ್ರಿಕೆ ಕೆಲವು ದಿನಗಳ ನಂತರ ಬ್ರಿಟೀಷ ಕೆಂಗಣ್ಣಿಗೆ ಗುರಿಯಾಯಿತು. ಶ್ರೀ. ಬಿ. ಎನ್. ಗುಪ್ತರವರು ೧೯೩೧ರಲ್ಲಿ ಪ್ರಜಾಮತ ಪತ್ರಿಕೆಯನ್ನು ೧೯೩೪ರಲ್ಲಿ "ಜನವಾಣಿ" ಪತ್ರಿಕೆಯನ್ನು ಪ್ರಾರಂಭಿಸಿದರು.

ಗಾಂಧಿಜೀ ೧೯೧೯ರಲ್ಲಿ ಮುಂಬಯಿ ಜಮೂನಾದಾಸ ದ್ವಾರಕಾದಾಸ್ ಎಂಬುವರಿಂದ "ಯಂಗ್ ಇಂಡಿಯಾ" ಪತ್ರಿಕೆಯನ್ನು ವಹಿಸಿಕೊಂಡರು ಇದೇ ಸಮಯದಲ್ಲಿ ಗುಜರಾತ ಭಾಷೆಯಲ್ಲಿ "ನವಜೀವನ" ಪತ್ರಿಕೆ ಪ್ರಾರಂಭಿಸಿದರು. ರಾಷ್ಟ್ರೀಯ ಮಹತ್ವದ ಹಾಗೂ ಸಾಮಾಜಿಕ ಮಹತ್ವದ ವಿಷಯಗಳಲ್ಲಿ ಜನಾಭಿಪ್ರಾಯ ರೂಪಿಸುವುದು ಪತ್ರಿಕೆಗಳ ಕರ್ತವ್ಯವೆಂಬುದು ಗಾಂಧಿಜೀಯವರ ದೃಢನಂಬಿಕೆಯಾಗಿತ್ತು. ಗಾಂಧಿಜಿಯವರು ಅಭಿಜಾತ ಪತ್ರಕರ್ತರು ಬರೆಯುವ ಕಲೆ ಅವರಿಗೆ ರಕ್ತಗತವಾಗಿ ಬಂದಿತ್ತು. ೧೯೩೨ರಲ್ಲಿ ಜೈಲಿನಲ್ಲಿದ್ದುಕೊಂಡೆ ಅವರು "ಹರಿಜನ" ಪತ್ರಿಕೆ ಪ್ರಾರಂಭಿಸಿದರು. ಅಸ್ಪೃಶ್ಯತೆ ವಿರುದ್ಧ ಜನಾಂದೋಲನ ಸಂಘಟಿಸುವುದು "ಹರಿಜನ" ಪತ್ರಿಕೆಯ ಧ್ಯೇಯವಾಗಿತ್ತು. ೧೮೬೯ರಲ್ಲಿ ಗಳಗನಾಥರು "ಸದ್ಬೋದ ಚಂದ್ರಿಕೆ" ಎಂಬ ಪತ್ರಿಕೆ ಪ್ರಾರಂಭಿಸಿದರು ಹಾವೇರಿಯಿಂದ ಪ್ರಕಟಗೊಳ್ಳುತ್ತಿತ್ತು; ಆಲೂರು ವೆಂಕಟರಾಯರು ಸುಮಾರು ೧೯೩೩-೩೪ರ ವೇಳೆಗೆ ಧಾರವಾಡದಲ್ಲಿ "ಜಯ ಕರ್ನಾಟಕ" ಪತ್ರಿಕೆ ಸ್ಥಾಪಿಸಿದರು. ಈ ಪತ್ರಿಕೆಯ ಮೂಲಕ "ಗೆಳೆಯರಗುಂಪು" ಎನ್ನುವ ಸಾಹಿತಿಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿತು ಈ ಗೆಳೆಯರ ಗುಂಪೆ ಮುಂದೆ ಜಯ ಕರ್ನಾಟಕ ಪತ್ರಿಕೆಯ ಜವಾಬ್ದಾರಿಯನ್ನು

ಹೊತ್ತಿಕೊಂಡಿತು. ೧೯೦೬ರಲ್ಲಿ ದಾವಣಗೇರಿಯಿಂದ "ಧನುರ್ದಾರಿ" ಎಂಬ ಪತ್ರಿಕೆಯನ್ನು ಹರ್ಡೇಕರ ಮಂಜಪ್ಪನವರು ಆರಂಭಿಸಿದರು. ಜೊತೆಗೆ ೧೯೩೧ರಲ್ಲಿ "ಶರಣ ಸಂದೇಶ" ಎನ್ನುವ ಮತ್ತೊಂದು ಪತ್ರಿಕೆಯನ್ನು ಹುಟ್ಟು ಹಾಕಿದರು. ರಾಜಕೀಯ, ಆರ್ಥಿಕ ವಿಷಯಗಳ ಜೊತೆಗೆ ಸಾಮಾಜಿಕ ವಿಷಯಗಳಿಗೂ ಪ್ರಾಮುಖ್ಯತೆ ಕೊಟ್ಟು ಪತ್ರಿಕೆ ಸರಿಯಾದ ಮಾರ್ಗದಲ್ಲಿ ಕ್ರಮಿಸುವಂತೆ ಕ್ರಿಯಾಶೀಲರಾದರು. ೧೯೫೧-೧೯೫೨ರಲ್ಲಿ ದೇಶದಲ್ಲಿ ಸ್ವಾತಂತ್ರ್ಯ ನಂತರ ಮೊಟ್ಟ ಮೊದಲ ರಾಷ್ಟ್ರೀಯ ಚುನಾವಣೆ ನಡೆಯಿತು. ಭಾರತದ ಪತ್ರಿಕೆಗಳು ತುಂಬ ವೃತ್ತಿಪರತೆಯಿಂದ ಚುನಾವಣೆಯನ್ನು ವರದಿ ಮಾಡಿ ಪ್ರಶಂಸೆಗೆ ಪಾತ್ರವಾದವು. ಸ್ವಾತಂತ್ರ್ಯೋತ್ತರ ಭಾರತೀಯ ಪತ್ರಕೋದ್ಯಮ ಪ್ರಗತಿಶಿಲಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದವು. ಭಾಷಾವಾರು ರಾಜ್ಯಗಳ ರಚನೆ, ಚೀನಿ ಆಕ್ರಮಣ, ಗೋವಾ ವಿಮೋಚನೆ ಮೊದಲಾದ ಸಂದರ್ಭಗಳಲ್ಲಿ ಪತ್ರಿಕೆಗಳು ರಚನಾತ್ಮಕ ಪಾತ್ರವಹಿಸಿದ್ದವು. ೧೯೭೫ರಲ್ಲಿ ಭಾರತದ ಪತ್ರಿಕೆಗಳಿಗೆ ಪರ್ವಕಾಲ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸಿದರು. ತುರ್ತುಪರಿಸ್ಥಿತಿ ಆಜ್ಞೆಯನ್ವಯ ಪತ್ರಿಕೆಗಳ ಮೇಲೆ ಸೆನ್ಸಾರ ವಿಧಿಸಲಾಯಿತು. ರಾಷ್ಟ್ರೀಯ ಮತ್ತು ಪ್ರಾದೇಶಿಕ ಪತ್ರಿಕೆಗಳು ತುರ್ತುಪರಿಸ್ಥಿತಿಯನ್ನು, ಸೆನ್ಸಾರ್ ಜಾರಿಯನ್ನು ಉಗ್ರವಾಗಿ ವಿರೋಧಿಸಿದವು ಇಂಡಿಯನ್ ಎಕ್ಸ್‌ಪ್ರೆಸ್, ಪ್ರಜಾವಾಣಿ ಪತ್ರಿಕೆಗಳು ತುರ್ತುಪರಿಸ್ಥಿತಿ ಮರುದಿನ ಸಂಪಾದಕೀಯ ಅಂಕಣವನ್ನು ಖಾಲಿಬಿಟ್ಟು ನವೀನ ರೀತಿಯಲ್ಲಿ ಪ್ರತಿಭಟಿಸಿದವು. ಇನ್ನೂರು ವರ್ಷಗಳಿಗೂ ಮಿಕ್ಕ ಇತಿಹಾಸ ಹೊಂದಿರುವ ಭಾರತೀಯ ಪತ್ರಿಕೋದ್ಯಮ ಭವ್ಯ ಪರಂಪರೆಯನ್ನು ಹೊಂದಿದೆ. ಈ ಇನ್ನೂರು ವರ್ಷಗಳಲ್ಲೂ ಭಾರತದ ಪತ್ರಿಕೆಗಳು ಸಮರ್ಪಿತ ಮನೋಭಾವದಿಂದ ಹಾಗೂ ನಿರ್ಭೀತ ಹೋರಾಟದಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ದುಡಿದಿವೆ. ರಾಷ್ಟ್ರಹಿತ, ಸಮಾಜಹಿತವನ್ನು ಪರಮೋಚ್ಚವೆಂದು ಭಾವಿಸಿ ಕಾರ್ಯನಿರ್ವಹಿಸಿವೆ. ಸ್ವಾತಂತ್ರ್ಯ ನಂತರ ಭಾರತೀಯ ಪತ್ರಿಕೋದ್ಯಮ, ಚಲನಚಿತ್ರ, ವಾಣಿಜ್ಯ, ಕ್ರೀಡಾಪತ್ರಿಕೆಗಳು, ವಿಜ್ಞಾನ ಪತ್ರಿಕೆಗಳು ಮೊದಲಾದ ಹೊಸ ಆಯಾಮಗಳನ್ನು ಪಡೆದುಕೊಂಡಿವೆ. ಇಂಗ್ಲೀಷ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ನೂರಾರು ನಿಯತಕಾಲಿಕೆಗಳು, ಪುರವಣಿಗಳು ಪ್ರಕಟವಾಗುತ್ತಿವೆ.

■■

ಮುಖ್ಯಸ್ಥರು ಕನ್ನಡ ವಿಭಾಗ, ಬಸವೇಶ್ವರ ಕಲಾ ಮತ್ತು ವಾಣಿಜ್ಯ, ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ. ಜಿಲ್ಲೆ – ವಿಜಯಪುರ-ಕರ್ನಾಟಕ



Scanned with CamScanner

'ವಿವಿಧತೆಯಲ್ಲಿ ಏಕತೆ' ಯನ್ನು ಹೊಂದಿದ ಪ್ರಪಂಚದ ಏಕೈಕ ರಾಷ್ಟ್ರ ಭಾರತ. ಹಲವು ಭಾಷೆ, ಜಾತಿ, ಹಲವಾರು ಧರ್ಮ, ಹಲವಾರು ನಂಬಿಕೆ - ಆಚರಣೆಗಳು, ವಿಭಿನ್ನ ಸಂಪನ್ಮೂಲಗಳಿಂದ ಕೂಡಿರುವುದು. ವಿಭಿನ್ನ ಸಂಪ್ರದಾಯ, ಆಚರಣೆಗಳಿಂದ ಪ್ರಾದೇಶಿಕವಾಗಿ ವ್ಯತ್ಯಾಸಗಳನ್ನು ಹೊಂದಿರುವುದು. ಆದರೆ ಸಮಗ್ರತೆ ಮತ್ತು ಸಮನ್ವಯತೆಯನ್ನು ಸಾಧಿಸಿಕೊಂಡಿದೆ. ಇದನ್ನೇ ಬಹುಮುಖಿ ಸಂಸ್ಕೃತಿಯ ಒಮ್ಮತದ ಪರಿಕಲ್ಪನೆ ಎನ್ನಬಹುದು. ಈ ಒಮ್ಮತ - ಏಕತೆ - ಸಹಬಾಳ್ವೆಯನ್ನೆ ನಾವು ರಾಷ್ಟ್ರೀಯತೆ ಎಂದು ಭಾರತದ ಸಂದರ್ಭದಲ್ಲಿ ಅರ್ಥೈಸಿಕೊಳ್ಳಬೇಕು. ಹೀಗೆ ಅರ್ಥೈಸಿಕೊಳ್ಳುವುದರೊಂದಿಗೆ ಆ ನಿಟ್ಟಿನಲ್ಲಿ ಬದುಕಬೇಕಾಗಿದೆ. ನಮ್ಮ ಪೂರ್ವಜರು ಸಹಬಾಳ್ವೆಗೆ - ಸಹಕಾರಕ್ಕೆ ಸರ್ವಧರ್ಮ ಸಮಷ್ಠಿ ಪ್ರಜ್ಞೆಗೆ ಸಾಕ್ಷಿಯಾಗಿದ್ದಾರೆ. ಇದನ್ನೆ ನಾವು ದೇಶ ಭಕ್ತಿಯ ಸಂದರ್ಭದಲ್ಲಿ ಬೇರು ಸಂಸ್ಕೃತಿ, ನೆಲ ಸಂಸ್ಕೃತಿ, ಪರಂಪರೆ, ಸಾಂಪ್ರದಾಯಿಕತೆ ಎನ್ನುತ್ತೇವೆ. ಇಂತಹ ರಾಷ್ಟ್ರೀಯತೆ ಮತ್ತು ಮಾಧ್ಯಮಗಳ ಕುರಿತು ವಿದ್ವತ್ಪೂರ್ಣ ಲೇಖನಗಳ ಸಂಕಲನ ಇದಾಗಿದ್ದು, ಓದುಗರಿಗೆ ಹೊಸ ಹೊಳಹುಗಳನ್ನು ಮೂಡಿಸುತ್ತವೆ.

ದೆಹಲಿ ವಿಶ್ವವಿದ್ಯಾಲಯದ ಪಿ.ಜಿ.ಡಿ.ಎ.ವ್ಹಿ. ಕಾಲೇಜಿನಲ್ಲಿ "ಪ್ರಸಾರ ಮಾಧ್ಯಮಗಳು ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಎಷ್ಟೊಂದು ಯಶಸ್ವಿಯಾಗುತ್ತಿದೆ? ಆಗಬೇಕು" ಎಂಬುದನ್ನು ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವುದರ ಪ್ರತಿಫಲವೇ ಈ ಸಂಕಲನ ಕೃತಿ ಪ್ರಕಟವಾಗಿದೆ. ೨೬ ಮತ್ತು ೨೭-೦೪-೨೦೧೮ ರಂದು 'ಮಾಧ್ಯಮ, ಸಾಹಿತ್ಯ-ರಾಷ್ಟ್ರೀಯತೆ' ಎಂಬ ವಿಷಯದ ಮೇಲೆ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿ ಅಲ್ಲಿ ಮಂಡಿಸಿ, ಆಯ್ಕೆಯಾದ ಪ್ರಬಂಧಗಳನ್ನು **'ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ'** ಎಂಬ ಕೃತಿಯನ್ನು ಸಂಕಲಿಸಿ, ತುಂಬಾ ಅರ್ಥಪೂರ್ಣವಾಗಿ ಹಾಗೂ ಶಿಸ್ತು ಬದ್ಧವಾಗಿ ಈ ಕೃತಿಯು ಸಂಪಾದಿತಗೊಳಿಸಿರುವರು. ಈ ಸಂಪಾದಿತ ಕೃತಿ ಸಾಹಿತ್ಯ ಲೋಕಕ್ಕೆ ಹೊಸ ಚಿಂತನೆಗಳು ಹಾಗೂ ಚರ್ಚೆಗಳೊಂದಿಗೆ ಸೇರ್ಪಡೆಯಾಗಿರುವುದು.

**ಡಾ. ಹರೀಶ ಅರೋಡಾ, ದೆಹಲಿ**

978-93-83813-40-7

ISBN 978-93-83813-40-7

**ಸೌಮ್ಯ ಪ್ರಕಾಶನ, ವಿಜಯಪುರ**

Scanned with CamScanner